ಚುಟುಕು ಸುದ್ದಿ

ರಾಷ್ಟ್ರೀಯ ಐಕ್ಯತಾ ಸಮಾವೇಶ

ಮಧುಗಿರಿ : ಭಾರತ ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶವನ್ನು ಬೆಂಗಳೂರಿನ ಅರಮನೆ ಮೈದಾನದಲ್ಲಿ ಫೆ.25ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಶಿವಣ್ಣ ತಿಳಿಸಿದ್ದಾರೆ.ಸಮಾವೇಶದಲ್ಲಿ ಎಲ್ಲಾ ದಲಿತಪರ ಮುಖಂಡರು, ಸ್ತ್ರೀಶಕ್ತಿ ಸಂಘಟನೆಯವರು, ಸ್ವಸಹಾಯ ಸಂಘದ ಮಹಿಳೆಯರು, ಹೋರಾಟಗಾರರು, ಸಾರ್ವಜನಿಕರು, ಭಾರತ ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶದಲ್ಲಿ ಭಾಗವಹಿಸಬೇಕೆಂದು ತಿಳಿಸಿದ್ದಾರೆ. ಮಧುಗಿರಿ ತಾಲೂಕಿನ ಎಲ್ಲಾ 39 ಗ್ರಾಮ ಪಂಚಾಯಿತಿಗಳಿಂದ ಒಂದೊಂದು ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಸಮಾವೇಶಕ್ಕೆ ಕರೆದುಕೊಂಡು ಹೋಗುವ ಮತ್ತು ಕಾರ್ಯಕ್ರಮ ಮುಗಿದ ನಂತರ ಕರೆ ತರುವ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಆದ್ದರಿಂದ ಸಾರ್ವಜನಿಕರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಐಕ್ಯತಾ ಸಮಾವೇಶವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದ್ದಾರೆ.

ಶೀಬಿ ನರಸಿಂಹಸ್ವಾಮಿ ದೇಗುಲದ ಬ್ರಹ್ಮರಥೋತ್ಸವ

ತುಮಕೂರು: ತಾಲೂಕು ಬೆಳ್ಳಾವಿ ಹೋಬಳಿಯ ಇತಿಹಾಸ ಪ್ರಸಿದ್ಧ ಹಾಗೂ ಪುರಾತನ ಶ್ರೀ ಶೀಬಿ ನರಸಿಂಹಸ್ವಾಮಿ ದೇವಾಲಯದಲ್ಲಿ ಬ್ರಹ್ಮರಥೋತ್ಸವವು ಫೆ. 25 ರ ಭಾನುವಾರ ಅಭಿಜಿನ್ ಮಹೂರ್ತದಲ್ಲಿ ನಡೆಯಲಿದೆ ಎಂದು ಧರ್ಮಕರ್ತ ಕರಣೀಕ ನಲ್ಲಪ್ಪ ತಿಳಿಸಿದ್ದಾರೆ. ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿ ದಿವ್ಯ ಸಾನಿಧ್ಯದಲ್ಲಿ ರಥೋತ್ಸವ ನಡೆಯಲಿದ್ದು ಫೆ. 22ರಿಂದಲೇ ವಿವಿಧ ಧಾರ್ಮಿಕ ಪೂಜಾದಿಗಳು ಪ್ರಾರಂಭವಾಗಿದ್ದು, 23 ರಂದು ಅಭಿಷೇಕ, ಅರ್ಚನೆ, ಧ್ವಜಾರೋಹಣ, ಗಜೇಂದ್ರಮೋಕ್ಷ, ಬೆಳ್ಳಿ ಡೋಲೋತ್ಸವ, 24 ರಂದು ಶ್ರೀ ಲೋಕಾಂಬ, ಚೆಂಚುಮಾಂಬ ಸಮೇತ ಶ್ರೀ ಶೀಬಿ ನರಸಿಂಹಸ್ವಾಮಿಯವರಿಗೆ ಕಲ್ಯಾಣೋತ್ಸವ, 26 ರಂದು ತೆಪ್ಪೋತ್ಸವ, ಮೃಗಯಾಯಾತ್ರೆ, ಶಯನೋತ್ಸವ, 27 ರಂದು ಶ್ರೀ ಲೋಕಾಂಬ, ಚೆಂಚುಮಾಂಬ ಅಮ್ಮನವರುಗಳಿಗೆ ಬಾಳೆಹಣ್ಣಿನ ಅಲಂಕಾರ, ಅವಭೃತ ಸ್ನಾನ, ಮಹಾಭಿಷೇಕ, ದೊಡ್ಡ ಗರುಡೋತ್ಸವ, 28 ರಂದು ದವನೋತ್ಸವ, ಹೆಜ್ಜೆ ಮಂಗಳಾರತಿ ನಡೆಯಲಿವೆ. ಮಹಾ ಶಿವರಾತ್ರಿ ಪ್ರಯುಕ್ತ ಮಾ. 8 ರಂದು ಶ್ರೀಅರ್ಧನಾರೀಶ್ವರ ಸ್ವಾಮಿಗೆ ಅಭಿಷೇಕ, ಅರ್ಚನೆ. ಪೂಜಾದಿಗಳು ಹಾಗೂ ಮಾ. 9 ರಂದು ಶ್ರೀಗೌರಿಗಂಗಾ ಚಂದ್ರಮೌಳೀಶ್ವರಸ್ವಾಮಿ ರಥೋತ್ಸವ ನಡೆಯಲಿದೆ ಎಂದು ತಿಳಿಸಿದ್ದಾರೆ.

ಬಿಜೆಪಿ ಹೆಚ್ಚು ಸ್ಥಾನ ಗಳಿಸುವಂತಾಗಲು ಎಲ್ಲರ ಶ್ರಮ ಅನಿವಾರ್ಯ | ಪ್ರತಿ ಕಾರ್ಯಕರ್ತರು ಕನಿಷ್ಠ 500 ಮತ ಹಾಕಿಸಿ

ಮತ್ತೊಮ್ಮೆ ನರೇಂದ್ರ ಮೋದಿ ಪ್ರಧಾನಿ ಅಗತ್ಯ

ಸಂ.ಕ.ಸಮಾಚಾರ, ತುಮಕೂರು

ಮತ್ತೊಮ್ಮೆ ಮೋದಿ ಪ್ರಧಾನಿ ಆಗಬೇಕಾದ ಅಗತ್ಯವಿದ್ದು ರಾಜ್ಯದಲ್ಲಿ ಬಿಜೆಪಿ ಹೆಚ್ಚು ಸ್ಥಾನಗಳನ್ನು ಗಳಿಸಲು ಎಲ್ಲರ ಶ್ರಮ ಅಗತ್ಯ ಎಂದು ತುಮಕೂರು ಲೋಕಸಭಾ ಕ್ಷೇತ್ರ ಉಸ್ತುವಾರಿ, ಶಾಸಕ ಗೋಪಾಲಯ್ಯ ಹೇಳಿದರು.

ನಗರದ ಭದ್ರಮ್ಮ ವೃತ್ತದ ಬಳಿ ಜಿಲ್ಲಾ ಬಿಜೆಪಿಯ ನೂತನ ಕಾರ್ಯಾಲಯ ಉದ್ಘಾಟಿಸಿ ಮಾತನಾಡಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲುವಿಗೆ ಸಂಘಟಿತರಾಗಿ ಶ್ರಮಿಸಿ ಮತ್ತೊಮ್ಮೆ ಬಿಜೆಪಿ ಸರ್ಕಾರ ಅಧಿಕಾರ ಹಿಡಿಯಲು ಎಲ್ಲರೂ ಶ್ರಮಿಸುವ ಸಂಕಲ್ಪ ಮಾಡುಬೇಕು ಎಂದು ಮನವಿ ಮಾಡಿದರು.

ಪ್ರಧಾನಿ ಸ್ಥಾನದಲ್ಲಿ ನರೇಂದ್ರ ಮೋದಿಯವರಿಗೆ ಸರಿಸಾಟಿಯಾಗಬಲ್ಲ, ಮೋದಿಯವರಿಗೆ ಹೋಲಿಕೆ ಮಾಡಬಹುದಾದ ಸಮರ್ಥ ನಾಯಕರು ಬೇರೆ ಪಕ್ಷಗಳಲ್ಲಿ ಇಲ್ಲ ಎಂಬುದು ಜನಸಾಮಾನ್ಯರಿಗೂ ತಿಳಿದಿದೆ. ಚುನಾವಣೆ ಗೆಲುವಿಗೆ ಮೋದಿ ಅಂಶವೂ ಪ್ರಮುಖ ಕಾರಣವಾಗುತ್ತದೆ. ಇದರ ಜೊತೆಗೆ ಮುಖಂಡರು ಕಾರ್ಯಕರ್ತರು, ಮೋದಿ ಸರ್ಕಾರದ ಜನಪರ ಯೋಜನೆಗಳು, ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸಬೇಕು ಎಂದರು. ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಮಾತನಾಡಿ, ಚುನಾವಣೆ ಸಂದರ್ಭದಲ್ಲಿ ಸಹಜವಾಗಿ ಪಕ್ಷದ ಸಂಘಟನೆ, ಬೆಳವಣಿಗೆಗೆ ಒತ್ತು ಸಿಗುತ್ತದೆ. ನಾವೀಗ ಅಂತಹ ಸಮಯದಲ್ಲಿದ್ದೇವೆ. ಈ ಕಾರ್ಯಾಲಯ ಆರಂಭವಾಗುವುದರೊಂದಿಗೆ ಪಕ್ಷದ ವಿಜಯದ ಬಾಗಿಲು ತೆರೆಯುವಂತಾಗಲಿ ಎಂದರು.

ಶಾಸಕ ಮುನಿರಾಜು ಮಾತನಾಡಿದರು. ತುಮಕೂರು ಜಿಲ್ಲೆ ಬಿಜೆಪಿ ಅಧ್ಯಕ್ಷ ಹೆಬ್ಬಾಕ ರವಿಶಂಕರ್, ಮಧುಗಿರಿ ಜಿಲ್ಲಾಧ್ಯಕ್ಷ ಹನುಂತೇಗೌಡ, ಶಾಸಕ ಜಿ.ಬಿ.ಜ್ಯೋತಿಗಣೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ, ರಾಜ್ಯ ಕಾರ್ಯದರ್ಶಿಗಳಾದ ವಿನಯ್ ಬಿದರೆ, ಅಂಬಿಕಾ ಹುಲಿನಾಯ್ಕರ್, ವಿಧಾನ ಪರಿಷತ್ ಮಾಜಿ ಸದಸ್ಯ ಡಾ.ಎಂ.ಆರ್.ಹುಲಿನಾಯ್ಕರ್, ಮುಖಂಡರಾದ ಎಂ.ಬಿ.ನಂದೀಶ್, ಎಸ್.ಶಿವಪ್ರಸಾದ್, ಎಸ್.ಪಿ.ಚಿದಾನಂದ್, ವೈ.ಹೆಚ್.ಹುಚ್ಚಯ್ಯ, ಭೈರಣ್ಣ, ದಿಲೀಪ್‌ಕುಮಾರ್, ಅನಿಲ್‌ಕುಮಾರ್, ಎಲ್.ಸಿ. ನಾಗರಾಜು ಮೊದಲಾದವರು ಭಾಗವಹಿಸಿದ್ದರು.

ನಗರದ ಭದ್ರಮ್ಮ ವೃತ್ತದ ಬಳಿ ಜಿಲ್ಲಾ ಬಿಜೆಪಿಯ ನೂತನ ಕಾರ್ಯಾಲಯವನ್ನು ತುಮಕೂರು ಲೋಕಸಭಾ ಕ್ಷೇತ್ರ ಉಸ್ತುವಾರಿ, ಶಾಸಕ ಗೋಪಾಲಯ್ಯ ಉದ್ಘಾಟಿಸಿದರು.

ನಾಯಕರು ಹಾಗೂ ಕಾರ್ಯಕರ್ತರು ಉತ್ತಮ ನಡೆನುಡಿ, ಜನರನ್ನು ವಿಶ್ವಾಸದಿಂದ ಬೆರೆಯುವ ಮನೋಭಾವ ಬೆಳೆಸಿಕೊಂಡು ಕಾರ್ಯೋನ್ಮುಖರಾದರೆ ಚುನಾವಣೆಯ ಗೆಲುವು ಸುಲಭವಾಗುತ್ತದೆ. ಪ್ರತಿ ಕಾರ್ಯಕರ್ತರು ಕನಿಷ್ಠ 500 ಮತ ಹಾಕಿಸುತ್ತೇವೆ ಎಂದು ಪ್ರತಿಜ್ಞೆ ಮಾಡಬೇಕು ಎಂದರು. ಮಂಡ್ಯ, ಹಾಸನ, ತುಮಕೂರು ಅತಿ ಸೂಕ್ಷ್ಮಕ್ಷೇತ್ರವಾಗಿದೆ. ಸುರೇಶ್ ಗೌಡರ ಬಳಿ ಕೆಲವು ಯೋಜನೆಗಳಿವೆ. ನನಗೂ ಕೆಲವು ತಂತ್ರಗಾರಿಕೆ ಗೊತ್ತಿದೆ. ಅದೆಲ್ಲವನ್ನೂ ಒಟ್ಟುಗೂಡಿಸಿ ಹೋರಾಟ ಮಾಡಬೇಕು ಎಂದು ಸಂಸದ ಜಿ.ಎಸ್.ಬಸವರಾಜು ಹೇಳಿದರು.

> ಹೊಸ ಮತದಾರರನ್ನು ಭೇಟಿ ಮಾಡಿ ಅವರಿಗೆ ಮೋದಿ ಸರ್ಕಾರದ ಸಾಧನೆ, ಹಿಂದಿನ ಯುಪಿಎ ಸರ್ಕಾರದ ವೈಫಲ್ಯಗಳನ್ನು ಮನವರಿಕೆ ಮಾಡಿಕೊಡಿ, ಬಿಜೆಪಿ ಸರ್ಕಾರದ ಯೋಜನೆಗಳ ಫಲಾನುಭವಿಗಳನ್ನು ಭೇಟಿ ಮಾಡಿ, ಅವರಿಗೆ ಬಿಜೆಪಿ ಬಗ್ಗೆ ವಿಶ್ವಾಸ ತುಂಬಿ.
> ■ ರಾಜೇಶ್
> | ರಾಜ್ಯ ಸಂಘಟನಾ ಕಾರ್ಯದರ್ಶಿ

> ಪಕ್ಷದ ಹಿರಿಯರು ಗೊಂದಲ ಸೃಷ್ಟಿಯಾಗುವಂತಹ ಹೇಳಿಕೆ ನೀಡಬೇಡಿ, ಅಂತಹ ಹೇಳಿಕೆಗಳು ಕಾರ್ಯಕರ್ತರಲ್ಲೂ ಗೊಂದಲ ಉಂಟುಮಾಡಿ ಚುನಾವಣೆ ಮೇಲೂ ಪರಿಣಾಮ ಬೀರಬಹುದು. ಪ್ರತಿ ಬೂತ್‌ನಲ್ಲೂ ಈ ಬಾರಿ ಶೇ. 10ರಷ್ಟು ಹೆಚ್ಚು ಮತಗಳು ಬಿಜೆಪಿಗೆ ದೊರೆಯುವಂತೆ ನೋಡಿಕೊಳ್ಳಬೇಕು ಎಂದು ಮೋದಿಯವರು ಹೇಳಿದ್ದಾರೆ ಅದರಂತೆ ಎಲ್ಲರೂ ಕಾಳಜಿಯಿಂದ ಕೆಲಸ ಮಾಡಬೇಕು.
> ■ ಜಿ.ಸುರೇಶ್ ಗೌಡ | ಶಾಸಕ

ಹೊಸ ರೈತರ ನೋಂದಣಿ ಪ್ರಕ್ರಿಯೆ ಆರಂಭ: ಸ್ವಾಗತ

ಸಂ.ಕ. ಸಮಾಚಾರ, ತಿಪಟೂರು

ನಫೆಡ್ ಕೊಬ್ಬರಿ ಖರೀದಿ ನೋಂದಣಿಯಲ್ಲಿ ಅಕ್ರಮ ನಡೆದಿರುವುದು ಸಾಬೀತಾಗಿರುವುದರಿಂದ ಸರ್ಕಾರ ಆಗಿರುವ ನೋಂದಣಿ ರದ್ದುಪಡಿಸಿ ಹೊಸದಾಗಿ ರೈತರ ನೋಂದಣಿ ಪ್ರಾರಂಭಿಸಲು ಆದೇಶಿಸಿರುವುದನ್ನು ಸ್ವಾಗತಿಸುತ್ತೇವೆ ಎಂದು ರೈತಸಂಘದ ತಾಲೂಕು ಅಧ್ಯಕ್ಷ ಜಯಚಂದ್ರ ಶರ್ಮ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಫೆಡ್ ಕೊಬ್ಬರಿ ಖರೀದಿ ನೋಂದಣಿಯಲ್ಲಿ ಆಗಿರುವ ಅಕ್ರಮವನ್ನು ರೈತ ಸಂಘ ಸರ್ಕಾರದ ಗಮನಕ್ಕೆ ತಂದು, ಹಲವಾರು ಜಿಲ್ಲೆಗಳಲ್ಲಿ ರೈತರ ನೋಂದಣಿ ವೇಳೆ ಅಕ್ರಮ ನಡೆದಿದ್ದು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಕ್ರಮ ನೋಂದಣಿಯನ್ನು ರದ್ದುಗೊಳಿಸಿ ಮರು ನೋಂದಣಿ ಮಾಡಲು ಆಗ್ರಹಿಸಿತ್ತು. ಅದರಂತೆ ಸರ್ಕಾರ ಮರು ನೋಂದಣಿಗೆ ಆದೇಶಿಸಿದ್ದು ಸರಿಯಾಗಿದೆ ಎಂದರು.

ಕೊಬ್ಬರಿ ಹೋರಾಟ ಸಮಿತಿ ಅಧ್ಯಕ್ಷ ಯೋಗೀಶ್ವರಸ್ವಾಮಿ ಮಾತನಾಡಿದರು. ರೈತರಾದ ಬಿಳಿಗೆರೆ ನಾಗೇಶ್, ಶ್ರೀಕಾಂತ್ ಕೆಳಹಟ್ಟಿ, ಪ್ರಾಂತ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಚನ್ನಬಸವಣ್ಣ ಮತ್ತಿತರಿದ್ದರು.

ವಿವೇಕ್ ವೀರಯ್ಯಗೆ ಡಾಕ್ಟರೇಟ್ ಪದವಿ

ಸಂ.ಕ. ಸಮಾಚಾರ, ತುಮಕೂರು

ನಗರದ ಶ್ರೀ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಜನ್ (ಸಾಹೇ) ವಿಶ್ವವಿದ್ಯಾಲಯದ ಕುಲಾಧಿಪತಿಗಳ ಸಲಹೆಗಾರರಾದ ವಿವೇಕ್‌ವೀರಯ್ಯ ಅವರು ಮಂಡ್ಯ ಜಿಲ್ಲೆಯ ಬೆಳ್ಳೂರಿನಲ್ಲಿರುವ ಆದಿಚುಂಚನಗಿರಿ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪಡೆದಿದ್ದಾರೆ.

ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದಲ್ಲಿ ಸಂಶೋಧನೆ ಕೈಗೊಂಡಿದ್ದ ಇವರು ಬೆಂಗಳೂರಿನ ಬಿಜಿಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿಯ ಪ್ರಾಂಶುಪಾಲ ಡಾ.ರವಿಕುಮಾರ್.ಜಿ.ಕೆ ಅವರ ಸಂಶೋಧನಾ ಮಾರ್ಗದರ್ಶನದಲ್ಲಿ ಭವಿಷ್ಯದ ಪೀಳಿಗೆಗಾಗಿ ಇಂಟರ್ನೆಟ್-ಆಫ್-ಥಿಂಗ್ಸ್ ಆಧಾರಿತ ಸಾಮಾಜಿಕ ಉದ್ಯಮಶೀಲತೆ, ಅಭಿವೃದ್ಧಿಶೀಲ ರಾಷ್ಟ್ರಗಳಿಗಾಗಿನ ಕಾರ್ಯತಂತ್ರದ ಪರಿಹಾರಗಳು ಕುರಿತ ವಿಮರ್ಶಾತ್ಮಕ ಅಧ್ಯಯನಕ್ಕೆ ಡಾಕ್ಟರೇಟ್ ಪದವಿ ನೀಡಲಾಗಿದೆ.

ಮೂಲತಃ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಮುಟ್ಟನಹಳ್ಳಿ ಗ್ರಾಮದವರಾಗಿದ್ದು, ಅಮೇರಿಕಾದ ನ್ಯೂಯಾರ್ಕ್ ವಿಶ್ವವಿದ್ಯಾಲಯ ಮತ್ತು ಹಾರ್ವರ್ಡ್ ಬ್ಯುಸಿನೆಸ್ ಸ್ಕೂಲ್‌ನಲ್ಲಿ ಉನ್ನತ ವಿದ್ಯಾಭ್ಯಾಸ ನಡೆಸಿದ್ದಾರೆ. ಶ್ರೀ ಸಿದ್ಧಾರ್ಥ ಇಂಜಿನಿಯರಿಂಗ್ ಕಾಲೇಜಿನ ಹಳೆಯ ವಿದ್ಯಾರ್ಥಿಯೂ ಕೂಡ ಆಗಿದ್ದು ಇವರ ತಂದೆ ಡಾ.ವೀರಯ್ಯ ಅವರು ಇದೇ ಸಂಸ್ಥೆಯಲ್ಲಿ 4 ದಶಕಗಳ ಸೇವೆ ಸಲ್ಲಿಸಿ, ಪ್ರಾಂಶುಪಾಲರಾಗಿ ನಿವೃತ್ತಿ ಹೊಂದಿದ್ದಾರೆ. ಈಗ ಸಾಹೇ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಡಾ.ಜಿ.ರಮೇಶ್ವರ ಅವರ ಸಲಹೆಗಾರರಾಗಿ ಮತ್ತು ಎಸ್‌ಎಸ್‌ಐಟಿಯಲ್ಲಿನ ಕಂಪ್ಯೂಟರ್ ಸೈನ್ಸ್‌ನ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಉನ್ನತ ವ್ಯಾಸಂಗದಜೊತೆಗೆ ಪಿಎಚ್‌ಡಿ ಪದವಿಗಳಿಸಿದ ಡಾ.ವಿವೇಕ ವೀರಯ್ಯ ಅವರನ್ನು ಸಾಹೇ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಡಾ.ಜಿ.ಪರಮೇಶ್ವರ ಮತ್ತು ವೈದ್ಯಕೀಯ, ಇಂಜಿನಿಯರಿಂಗ್ ಕಾಲೇಜು ಸೇರಿ ಅಂಗ ಸಂಸ್ಥೆಗಳ ಪ್ರಾಂಶುಪಾಲರು ಮತ್ತು ಪ್ರಾಧ್ಯಾಪಕರು ಅಭಿನಂದಿಸಿದ್ದಾರೆ.

ಎಂಪಿ ಚುನಾವಣೆ ಟಿಕೆಟ್ ಸಿಗುವ ನಿರೀಕ್ಷೆ: ಮಾಧುಸ್ವಾಮಿ

ಸಂ.ಕ.ಸಮಾಚಾರ, ತುಮಕೂರು

ತುಮಕೂರು ಲೋಕಸಭಾ ಟಿಕೆಟ್ ನನಗೆ ಸಿಗುತ್ತದೆ ಎನ್ನುವ ವಿಶ್ವಾಸ ಇದೆ ಎಂದು ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದರು.

ತುಮಕೂರಿನಲ್ಲಿ ಬಿಜೆಪಿ ಕಚೇರಿ ಉದ್ಘಾಟನೆ ಬಳಿಕ ಮಾತನಾಡಿ, ನಾನು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರನ್ನ ಭೇಟಿ ಮಾಡಿ ಮಾತನಾಡಿದ್ದೇನೆ.

ಚುನಾವಣೆ ಸಮೀಪಿಸುತ್ತಿದ್ದಂತೆ ನಮ್ಮ ಅಸ್ತಿತ್ವಕ್ಕಾಗಿ ನಾವು ಒಗ್ಗಟ್ಟು ಆಗಲೇಬೇಕು. ಗುಡುಗು ಮಿಂಚು ಮೋಡ ಆದ ನಂತರ ತಾನೆ ವಾತಾವರಣ ತಿಳಿಯಾಗೋದು. ನಮ್ಮಲ್ಲೂ ವಾತಾವರಣ ತಿಳಿಯಾಗುತ್ತೆ. ನಾಲ್ಕು ಜನ ಒಟ್ಟಾಗಿದ್ದರೆ ಒಬ್ಬ ಪಿತೂರಿಗಾರ ಇದ್ದೇ ಇರುತ್ತಾನೆ ಎಂದರು. ಕಳೆದುಕೊಂಡಿರೋದನ್ನು ಈಚುನಾವಣೆಯಲ್ಲಿ ಪಡೆದು ಕೊಳ್ಳಬೇಕಾಗಿದೆ. ಚುನಾವಣೆ ಯಲ್ಲಿ 5-6 ಸಾವಿರ ವೋಟ್‌ನಿಂದ ಸೋತಿದ್ದು ಯಾರ ವಿರುದ್ಧ ಎತ್ತಿಕಟ್ಟಲ್ಲಿ ಕ್ಕ ಮಾಡ್ತಿದ್ದಾರೋ: ಸಮಾಜ ಕಲ್ಯಾಣ ಇಲಾಖೆ ಸಚಿವರು ಇತ್ತೀಚೆಗೆ ತೆಗೆದುಕೊಳ್ಳುತ್ತಿರುವ ತೀರ್ಮಾನಗಳಿಗೆ ನನ್ನ ವೈಯಕ್ತಿಕ ವಿರೋಧ ಇದೆ. ಸಂವಿಧಾನ ಜಾಗೃತಿ ಜಾಥಾ ಯಾಕೆ ಮಾಡ್ತಿದ್ದಾರೆ ಅಂತ ಗೊತ್ತಿಲ್ಲ. ಇದನ್ನ ಯಾರ ವಿರುದ್ಧ ಎತ್ತಿಕಟ್ಟಲ್ಲಿಕ್ಕೆ ಮಾಡ್ತಿದ್ದಾರೋ ಗೊತ್ತಿಲ್ಲ. ಸ್ವತಂತ್ರ ಬಂದು 70 ವರ್ಷ ಆಯ್ತು, ಈಗ ಜಾಗೃತಿ ಮಾಡ್ತಿದ್ದಾರೆ. ಯಾರಾದರೂ ಸಂವಿಧಾನ ವಿರುದ್ಧ ಇದ್ರೆ ಜಾಗೃತಿ ಮೂಡಿಸಬೇಕಿತ್ತು ಎಂದು ಮಾಧುಸ್ವಾಮಿ ಕುಟುಕಿದರು.

ಮಹತ್ವವಲ್ಲ. ಮೋದಿ ಶಕ್ತಿ ಬಳಸಿಕೊಂಡು ಮುನ್ನಡೆಯಬೇಕು. ಇಂದು ಮತದಾರರ ನನಗೇನಾಯಿತು ಅಂತ ಯೋಚನೆ ಮಾಡುತ್ತಿದ್ದಾರೆ. ಆದರೆ ನಾವು ರಾಷ್ಟ್ರಕ್ಕೆ ಏನಾಗಬೇಕು ಅಂತ ಚರ್ಚೆ ಮಾಡುತ್ತಿದ್ದೇವೆ. ಈ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು ಎಂದರು.

IN THE COURT OF VI ADD CITY CIVIL COURT AT CHENNAI
OS No.2054 of 2023

M/s. Sundaram Finance Limited,
Represented by its Authorized Signatory Mr. P. Kumanan,
Having its office at No.21, Patullos Road, Chennai -600002.
....Petitioner/Plaintiff
Versus
M/s. ROOTS TOURS N TRAVELS
Prop S Sagar
No.2D, 2nd Floor, Y. S. Apartment, Gurudatta Layout, BSK 3rd Stage, Hosakerehalli Bangalore-560085
...Respondent/Defendant

Please take notice that the above OS No.2054 of 2023 Came up for Hearing on 02.02.2024 Before this Hon'ble IN THE COURT OF VI ADD CITY CIVIL COURT AT CHENNAI the Hon'ble Court was Pleased to order notice to you by way of Publication you are hear by requested to enter your appearance in either in person or through advocate before the same Court on 29.02.2024 at 10.30 am Failing which the above matter will be heard your absence and suitable orders passed.

S.K.Mariyappan,
Advocate
Counsel for Plaintiff

ಆಸ್ತಿ ಮಾರಾಟಕ್ಕಾಗಿ ಆನ್‌ಲೈನ್ ಇ-ಹರಾಜು
ಕೋಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್
ಸ್ಥಿರಾಸ್ತಿ ಮಾರಾಟಕ್ಕೆ ಮಾರಾಟ ನೋಟಿಸ್
ಆರ್ಥಿಕ ಸ್ವತ್ತಿನ ಭದ್ರತೆ ಮತ್ತು ಪುನರ್‌ನಿರ್ಮಾಣ ಮತ್ತು ಭದ್ರತಾ ಬಡ್ಡಿ ಕಾಯಿದೆ ಜಾರಿ, 2002ರ ಅಡಿಯಲ್ಲಿ ನಿಯಮ 8 (5) ಮತ್ತು ನಿಯಮ 9(1)ರ ಅಡಿ ನಿಯಮದ ನಿಬಂಧನೆಗಳನ್ನು ಓದಿಕೊಂಡಂತೆ ಭದ್ರತಾ ಬಡ್ಡಿ (ಜಾರಿ) ನಿಯಮ, 2002ರ ಅಡಿ ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.
ಈ ಮೂಲಕ ಸಾರ್ವಜನಿಕರು ಮತ್ತು ನಿರ್ದಿಷ್ಟವಾಗಿ ಸಾಲಗಾರ (ರು) ಮತ್ತು ಜಾಮೀನುದಾರರಿಗೆ ಸೂಚಿಸುವುದು ಏನೆಂದರೆ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು ಭದ್ರತಾ ಸಾಲಗಾರರಿಗೆ ಅಡಮಾನ/ಒತ್ತಿ ಇಡಲಾಗಿದ್ದು, ಅದನ್ನು ಕೋಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್ (ಈ ನಂತರ "ಪಿಎನ್‌ಜಿ ಎಚ್‌ಎಫ್‌ಎಲ್" ಎಂದಾಗಿದ್ದು) ಅಧಿಕೃತ ಅಧಿಕಾರಿಯು ಸ್ವಾಧೀನ ಪಡಿಸಿಕೊಂಡಿದ್ದು, ಸಾಲದ ಒಪ್ಪಂದದ ನಿಯೋಜನೆ ಅನುಸಾರ ಕೋಟಕ್ ಮಹೀಂದ್ರ ಬ್ಯಾಂಕ್ ಪರವಾಗಿ "ಪಿಎನ್‌ಜಿಎಚ್‌ಎಫ್‌ಎಲ್"ಗೆ, ಬಾಕಿ ಉಳಿದಿರುವ ಮೊತ್ತ ರೂ. 1,25,03,001.13/- (ರೂಪಾಯಿ ಒಂದು ಕೋಟಿ ಇಪ್ಪತ್ತೈದು ಲಕ್ಷ ಮೂರು ಸಾವಿರ ಒಂದು ಮತ್ತು ಹದಿಮೂರು ಪೈಸೆ ಮಾತ್ರ) ಅನ್ನು ದಿನಾಂಕ 16.11.2018 ರಂತೆ ಮತ್ತು ದಿನಾಂಕ : 16.11.2018 ರಿಂದ ಒಪ್ಪಂದದ ಬಡ್ಡಿ, ಪಾವತಿಯಾಗುವವರೆಗೆ ಮೆಚ್ಚ ಹಾಗೂ ಶುಲ್ಕದೊಂದಿಗೆ ಅನ್ವಯವಾಗುವ ಮೊತ್ತದ ವಸೂಲಿಗಾಗಿ ಸಾಲದ ಖಾತೆ ನಂ. HOU/BAN/0816/310959 ರಲ್ಲಿ ತಿಳಿಸಲಾದ ಮೊತ್ತವನ್ನು ಕೆಎಂಇಎಲ್‌ನ ಭದ್ರತಾ ಸಾಲಗಾರರು ಶ್ರೀ ಅಶ್ವಿನ್ ಕೆ.ಸಿ., ಮೆ. ವೈಬ್ರಂಟ್ ಇಕೋ ಫಾರ್ಮ್, ಅವರ ಇಚ್ಛೆತಿಳಿಸಲಾದ ಆಸ್ತಿಯನ್ನು "ಎಲ್ಲದೆಯೋ ಹಾಗೆ", "ಏನಿದೆಯೋ ಹಾಗೆ" ಮತ್ತು "ಹೇಗಿದೆಯೋ ಹಾಗೆ" ಅದರ ಮಾರಾಟವನ್ನು ದಿನಾಂಕ 15.03.2024 ರಂದು ಮಧ್ಯಾಹ್ನ 12.00